**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 04.07.2021.**

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 182/2021 ಕಲಂ: 78 (3) ಕೆ.ಪಿ.ಆ್ಯಕ್ಟ**

ದಿನಾಂಕ 03.07.2021 ರಂದು 15:30 ಗಂಟೆಯ ನಡುವೆ ಇದರಲ್ಲಿಯ ಆರೋಪಿತನಾದ ಗೋಪಾಲ ಮಲ್ಲಪ್ಪ ಗೊಡೆಕರ್ ಸಾ॥ ಅತ್ತಾಲಟ್ಟಿ ತಾ॥ ತಿಕೋಟಾ ಜಿ॥ ವಿಜಯಪುರ ಈತನು ತನ್ನ ಫಾಯ್ದೇಗೋಸ್ಕರ ಅತ್ತಾಲಟ್ಟಿ ಗ್ರಾಮದಲ್ಲಿ ಬೀರಲಿಂಗೇಶ್ವರ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಜನರಿಂದ 1 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಕಲ್ಯಾಣ ಮಟಕಾ ಅಂಬುವ ಓ.ಸಿ ಜೂಜಾಟವನ್ನು ಬರೆದುಕೊಂಡು ಚೀಟಿ ಕೊಡುವ ಕಾಲಕ್ಕೆ ರೇಡ ಮಾಡಿ ಹಿಡಿದಿದ್ದು ಅದೆ. ಜಪ್ತಾದ ಮಾಲು: 1) ರೋಖ ಹಣ 350– ರೂ ಗಳು 2) ಓ ಸಿ ಮಟಕಾ ಅಂಕಿ ಸಂಖ್ಯೆ ಬರೆದ ಚೀಟಿ ಒಂದು ಅ:ಕಿ: 00–00 3) ಬಾಪೆನ್ ಒಂದು ಕಿ: 00–00 ಈ ಬಗ್ಗೆ ಸ:ತ: ಜಿ ಎಸ್ ಉಪ್ಪಾರ ಪಿಎಸ್ಐ ವಿಜಯಪೂರ ಗ್ರಾಮೀಣ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 03.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 102/2021 ಕಲಂ: ಮನುಷ್ಯ ಕಾಣೆ**

*ದಿನಾಂಕ* 01.07.2021 ರಂದು 16:30 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಮೈನೋದ್ದೀನ ತಂದೆ ಖಾದೀರಸಾಬ ಮುಲ್ಲಾ ಸಾ॥ ಹಿಟ್ಟಿನಹಳ್ಳಿ ತಾ॥ಜಿ॥ ವಿಜಯಪುರ ಈತನು ಶಿವಪ್ಪ ತಂದೆ ದೇವಪ್ಪ ತಿಕೋಟಿ ಈತನು ತಿಕೋಟಾ ಗ್ರಾಮದ ಶ್ರೀ ಹಾಜೀಮಸ್ತಾನ ದರ್ಗಾಕ್ಕೆ ದಿನಾಂಕ: 01.07.2021 ರಂದು ದೇವರ ಕಾರ್ಯಕ್ರಮ ಮಾಡಿದ್ದು ಆ ಕಾರ್ಯಕ್ರಮಕ್ಕೆ ಮೈನೋದ್ದೀನ ಈತನು ಸಹ ಹೋಗಿ ತಿಕೋಟಾ ಶ್ರೀ ಹಾಜೀಮಸ್ತಾನ ದರ್ಗಾದಿಂದ ಸಂಜೆ 4:30 ಗಂಟೆ ಸುಮಾರಿಗೆ ಎಲ್ಲಿಯೋ ಹೋಗಿ ಕಾಣೆಯಾದವನು ಇನ್ನೂವರೆಗೆ ಮನಗೆ ಬಂದಿರುವದಿಲ್ಲಾ. ಅಂತಾ ವಗೈರೆ ವರದಿಯಲ್ಲಿ ನಮೂದು ಅದೆ. *ಈ ಬಗ್ಗೆ ಖಾದೀರಸಾಬ* ಇಮಾಮಸಾಬ ಮುಲ್ಲಾ ಸಾ॥ ಹಿಟ್ಟಿನಹಳ್ಳಿ ತಾ॥ಜಿ॥ ವಿಜಯಪುರ *ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 03.07,2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.*

**3] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 80/2021 ಕಲಂ: : 143, 147, 148, 324, 307, 447, 354, 504, 506(2), ರೆ/ವು 149 ಐಪಿಸಿ**

ದಿನಾಂಕ 02.07.2021 ರಂದು 17.30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಅನೀಲಕುಮಾರ ಲಕ್ಕಪ್ಪ @ ಸಹದೇವ ಹಿಕ್ಕನಗುತ್ತಿ 2] ಮಲಕವ್ವ ಲಕ್ಕಪ್ಪ@ ಸಹದೇವ ಹಿಕ್ಕನಗುತ್ತಿ 3] ಭಾರತಿ ಚಿದಾನಂದ ಪೂಜಾರಿ4] ಆರತಿ ಕುಮಾರ ಉಕ್ಕಲಿ 5] ರಮಾನಂದ ಕೆಂಚಪ್ಪ ಹಿಕ್ಕನಗುತ್ತಿ 6] ಕೆಂಚಪ್ಪ ಜೆಟ್ಟೆಪ್ಪ ಹಿಕ್ಕನಗುತ್ತಿ 7] ಸಾತವ್ವ @ ಯಲ್ಲವ್ವ ಕೆಂಚಪ್ಪ ಹಿಕ್ಕನಗುತ್ತಿ 8] ಶ್ಯಾಯವ್ವ ಕೆಂಚಪ್ಪ ಹಿಕ್ಕನಗುತ್ತಿ ಸಾ॥ ಎಲ್ಲರೂ ಬಳಗಾನೂರ ತಾ॥ ಸಿಂದಗಿ 9] ಚಿದಾನಂದ ತಂದೆ ವಿಠ್ಠಲ ಪೂಜಾರಿ ಸಾ॥ ಮದರಿ ತಾ॥ ಸಿಂದಗಿ. ಪಿರ್ಯಾದಿಯ ಗಂಡನು ತನ್ನ ಒಟ್ಟು 14 ಎಕರೆ ಜಮೀನದಲ್ಲಿ 7 ಎಕರೆ ಜಮೀನನ್ನು ಇದರಲ್ಲಿಯ ಪಿರ್ಯಾದಿಯ ಎರಡನೆಯ ಮಗಳಾದ ರೂಪಾಲಿ ಇವಳ ಹೆಸರಿಲೆ ಬಿಟ್ಟುಕೊಟ್ಟು ಪಿರ್ಯಾದಿಯ ಜೊತೆ ವಾಸವಾಗಿದ್ದರಿಂದ ಆರೋಪಿತರು ಸಿಟ್ಟಾಗಿ ಪಿರ್ಯಾದಿಗೆ ಮತ್ತು ಪಿರ್ಯಾದಿಯ ಗಂಡನಿಗೆ ಮತ್ತು ಮಕ್ಕಳಿಗೆ ಕೊಲೆ ಮಾಡಿ ಆಸ್ತಿ ತೆಗೆದುಕೊಳ್ಳುವ ಉದ್ದೇಶದಿಂದ ನಿನ್ನೆ ಪಿರ್ಯಾದಿದಾರಳು ತಮ್ಮ ಜಮೀನದಲ್ಲಿ ಸಾಗುವಳಿ ಮಾಡುವ ಸಲುವಾಗಿ ತಮ್ಮೂರ ಶರಣಗೌಡ ಪಾಟೀಲ ಇವರ ಟ್ರ್ಯಾಕ್ಟರದಿಂದ ರೂಟರ್ ಹೊಡಿಸಲಿಕ್ಕೆ ಹತ್ತಿದ್ದಾಗ ಸಾಯಂಕಾಲ 05.30 ಗಂಟೆಯ ಸುಮಾರಿಗೆ ಆರೋಪಿತರು ತಮ್ಮ ತಮ್ಮ ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ಪಿರ್ಯಾದಿಯ ಜಮೀನದಲ್ಲಿ ಅತಿಕ್ರಮಣ ಪ್ರವೇಶ ಮಾಡಿ ಬಂದು ನಿಮ್ಮಲ್ಲೆರಿಗೂ ಇವತ್ತು ಬೀಡುವದಿಲ್ಲ ಹೊಡೆದು ಖಲಾಸ ಮಾಡಿ ಜಮೀನು ತೋಗೋತಿವಿ ಅಂತಾ ಬಾಯಿಗೆ ಬಂದಂತೆ ಹೊಲಸು ಬೈಯುತ್ತಾ ಆರೋಪಿ ಅ.ನಂ. 1 ಅನೀಲಕುಮಾರ ಇತನು ಬಡಿಗೆಯಿಂದ ಪಿರ್ಯಾದಿಯ ಗಂಡನಿಗೆ ತಲೆಯಲ್ಲಿ ಹೊಡೆದ ರಕ್ತ ಗಾಯ ಪಡಿಸಿದ್ದು ಅಲ್ಲದೆ ಆರೋಪಿ ಅ.ನಂ, 2 ಮತ್ತು 3 ನೇದವರು ಬಡಿಗೆಯಿಂದ ಪಿರ್ಯಾದಿಯ ಬಲಗೈ ಮೊಳಕೈ ಕೆಳಗೆ ಮತ್ತು ಎರಡು ಚೆಪ್ಪೆಗಳಿಗೆ ಹೊಡೆದು ಒಳಪೆಟ್ಟು ಪಡಿಸಿದ್ದು ಅಲ್ಲದೆ ಆರೋಪಿ ಅ.ನಂ. 3 ಮತ್ತು 9 ನೇದವರು ಬಡಿಗೆಗಳಿಂದ ಪಿರ್ಯಾದಿಯ ಮಗಳಾದ ದೀಪಾ ಇವಳಗೆ ಚಪ್ಪೆಗೆ, ತೊಡೆಗೆ ಹೊಡೆದು ಒಳಪೆಟ್ಟು ಪಡಿಸಿದ್ದು, ಅಲ್ಲದೆ ಪಿರ್ಯಾದಿಯ ನಾದನಿಯಾದ ನಿಂಗಮ್ಮ ಇವಳಗೆ ಬಡಿಗೆಯಿಂದ ತಲೆ ಬೆನ್ನಿಗೆ, ರಟ್ಟೆಗೆ ಬಡಿಗೆಯಿಂದ ಹೊಡೆದು ಒಳಪೆಟ್ಟು ಪಡಿಸಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ. ಈ ಬಗ್ಗೆ ಮಾಹಾದೇವಿ ಗಂಡ ಸಹದೇವ @ ಲಕ್ಕಪ್ಪ ಹಿಕ್ಕನಗುತ್ತಿ ಸಾ॥ ಬಳಗಾನೂರ ತಾ॥ ಸಿಂದಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 03.07,2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.